**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.39-2023** **ಪಿ . ಡಬ್ಲ್ಯೂ: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಅಪ್ಸರಿ<br>ಬನ್ನಿಮಂಟಪ, ಮೈಸೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 23-08-2024. |

**ಪಾಟೀ ಸವಾಲು: ಪ್ರತಿವಾದಿಗಳ ಶ್ರೀ ಹೆಚ್.ಪಿ.ಎಂ ವಕೀಲರಿಂದ:**

ದಾವಾ ಷೆಡ್ಯೂಲ್ ಹಂಪಾಪುರ ಹರದನಹಳ್ಳಿಯಲ್ಲಿ ಇರುತ್ತದೆ. ಅದರಿ ಸರ್ವೇ ನಂ.215/3 ಆಗಿದ್ದು, ಅದರ ವಿಸ್ತೀರ್ಣ 1 ಎಕರೆ 2 ಗುಂಟೆ ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ:-ಅಜೀಂ ರವರ ಸ್ವತ್ತು, ಪಶ್ಚಿಮಕ್ಕೆ:-ಸುಬ್ಬಪ್ಪನವರ ಸ್ವತ್ತು, ಉತ್ತರಕ್ಕೆ:-ಸರ್ಕಾರಿ ಸ್ವತ್ತು ಹಾಗೂ ದಕ್ಷಿಣಕ್ಕೆ:-ನಾಗರಾಜ ಮೂರ್ತಿ ರವರ ಸ್ವತ್ತು ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ ನನ್ನ ತಾತನವರಿಂದ ಬಂದಿರುತ್ತದೆ. ನನ್ನ ತಾತನವರ ಹೆಸರು ಅಮೀರ್ ಸಾಬ್ ಆಗಿದ್ದು, ನನ್ನ ತಾತನ ತಂದೆ ಹೆಸರು ಇಮಾಂಸಾಬ್ ಆಗಿರುತ್ತದೆ. ಅದೇ ರೀತಿ ನನ್ನ ತಂದೆ ಹೆಸರು ಇಮಾಂಸಾಬ್ ಆಗಿರುತ್ತದೆ. ನನ್ನ ತಂದೆ ಮತ್ತು ಮುತ್ತಾತನ ಹೆಸರು ಇಮಾಂಸಾಬ್ ಆಗಿರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ತಂದೆಯವರು ಮರಿನಾಯ್ಕ ರವರಿಗೆ ರೂ.300/- ಗಳಿಗೆ 1972 ಅಥವಾ 1973 ರಲ್ಲಿ ಭೋಗ್ಯ ಮಾಡಿರುತ್ತಾರೆ.

2. ನನ್ನ ಮುತ್ತಾತನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ಮುತ್ತಾತನವರಿಗೆ ಅಮೀರ್ ಸಾಬ್, ಹುಸೇನ್‌ಸಾಬ್ ಮತ್ತು ಮಹಮದ್ ಸಾಬ್ ಎಂಬ 3 ಜನ ಮಕ್ಕಳು ಇದ್ದರು ಎಂದರೆ ಸರಿ. ನನ್ನ ಮುತ್ತಾತನವರಿಗೆ ಸೇರಿದ 3 ಎಕರೆ ಸ್ವತ್ತನ್ನು ಅವರ ಮಕ್ಕಳಾದ ಅಮೀರ್ ಸಾಬ್, ಹುಸೇನ್‌ಸಾಬ್ ಮತ್ತು

ಮಹಮದ್ ಸಾಬ್ ರವರು ತಲಾ ಒಂದು ಎಕರೆಯಂತೆ ಹಂಚಿಕೆ ಮಾಡಿಕೊಂಡಿದ್ದು, ಆ ರೀತಿ ಹಂಚಿಕೆ ಮಾಡಿಕೊಂಡಿದ್ದ ಸ್ವತ್ತಿನಲ್ಲಿ ಮಹಮದ್ ಸಾಬ್ ರವರು ಪ್ರತಿವಾದಿಯವರ ತಂದೆ ಮರಿನಾಯ್ಕ ರವರಿಗೆ 1 ಎಕರೆ ಸ್ವತ್ತನ್ನು ದಿ.26/04/1966 ರಲ್ಲಿ ರೂ.500/- ಗಳಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮಹಮದ್ ಸಾಬ್ ರವರು ಸ್ವತ್ತನ್ನು ಮಾರಾಟ ಮಾಡಿರುವುದರಿಂದ ಸದರಿ ಸ್ವತ್ತಿಗೆ ಪ್ರತಿವಾದಿಯವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಎಷ್ಟು ವರ್ಷಗಳ ಅವಧಿಗೆ ಸ್ವತ್ತನ್ನು ಭೋಗ್ಯ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೂ ಮಹಮದ್ ಸಾಬ್ ರವರು ಪ್ರತಿವಾದಿಯ ತಂದೆಯವರಿಗೆ ಮಾರಾಟ ಮಾಡಿರುವ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

3. ಸರ್ವೇ ನಂ.215 ರ ಒಟ್ಟು ವಿಸ್ತೀರ್ಣ 2 ಎಕರೆ 29 ಗುಂಟೆ ಇದ್ದು, ಸದರಿ ಸ್ವತ್ತಿನಲ್ಲಿ 0.33.08 ಗುಂಟೆ ಸ್ವತ್ತು ಬಸಪ್ಪ ಬಿನ್ ಸುಬ್ಬಪ್ಪನವರಿಗೆ, 0.33.08 ಗುಂಟೆ ಸ್ವತ್ತು ನಾಗಮ್ಮ ಕೋಂ ಲೇಟ್ ಮಹದೇವಪ್ಪ ರವರಿಗೆ ಮತ್ತು 1 ಎಕರೆ 02 ಗುಂಟೆ ಸ್ವತ್ತು ಮರಿನಾಯ್ಕ ರವರ ಹೆಸರಿಗೆ ಹಂಚಿಕೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು 1966 ರಲ್ಲಿಯೇ ಮಹಮದ್ ಸಾಬ್ ರವರಿಂದ ಪ್ರತಿವಾದಿಗಳ ತಂದೆಯರಿಗೆ ಕ್ರಯವಾಗಿರುತ್ತದೆ ಎಂದರೆ ಸರಿಯಲ್ಲ. 1966 ರಿಂದಲೂ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತ ದಾಖಲೆಗಳು ಮರಿನಾಯ್ಕ ರವರ ಹೆಸರಿನಲ್ಲಿ ಇದ್ದು, ಅವರ ಕಾಲ ನಂತರ ಅವರ ಮಕ್ಕಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.215/3 ರಲ್ಲಿ 2 ಎಕರೆ 29 ಗುಂಟೆ ಸ್ವತ್ತು ಇದ್ದು ಪ್ರತಿವಾದಿಯವರ ತಂದೆಯವರ ಹೆಸರಿಗೆ ಕ್ರಯವಾಗಿರುವ 1 ಎಕರೆ 2 ಗುಂಟೆ ಸ್ವತ್ತನ್ನು ಹೊರತುಪಡಿಸಿ ಉಳಿದ ಸ್ವತ್ತಿಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1966 ರಲ್ಲಿ ಮಹಮದ್ ಸಾಬ್ ರವರು ಪ್ರತಿವಾದಿಯವರ ತಂದೆಯವರಿಗೆ 1 ಎಕರೆ 2 ಗುಂಟೆ ಸ್ವತ್ತನ್ನು ಮಾರಾಟ ಮಾಡುವ ಪೂರ್ವದಲ್ಲಿ ರೂ.100/-ಗಳಿಗೆ ಸದರಿ ಸ್ವತ್ತನ್ನು ಪ್ರತಿವಾದಿಯ ತಾಯಿಯವರಾದ

ತೋಪಮ್ಮ ರವರಿಗೆ ಭೋಗ್ಯ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಮಹಮದ್ ಸಾಬ್ ರವರು ರೂ.500/– ಗಳಿಗೆ ಪ್ರತಿವಾದಿಯವ ತಂದೆಯವರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟು ತೋಪಮ್ಮ ರವರಿಗೆ ಭೋಗ್ಯ ಮಾಡಿದ್ದ ರೂ.100/– ಕಳೆದು ಒಟ್ಟು ರೂ.400/– ಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಮಹಮದ್ ಸಾಬ್ ರವರು ಮಾರಾಟ ಮಾಡುತ್ತಿರುವ ಸ್ವತ್ತಿಗೂ ನನ್ನ ತಂದೆ ಇಮಾಂಸಾಬ್ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಸ್ಪಷ್ಟವಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮಹಮದ್ ಸಾಬ್ ರವರು ಬರೆದುಕೊಟ್ಟಿರುವ ಕ್ರಯ ಪತ್ರದ ಷೆಡ್ಯೂಲ್‌ನಲ್ಲಿ ಪೂರ್ವದ ಕಡೆಗೆ ನಿಟ್ಟಾಗ್ಗಿ ದಕ್ಷಿಣದ ಕಡೆಗೆ ನನ್ನ ತಾತ ಅಮೀರ್ ಸಾಬ್ ರವರ ಜಮೀನು, ಉತ್ತರದ ಕಡೆಗೆ ಹುಸೇನ್ ಸಾಬ್ ರವರ ಜಮೀನು ಎಂದು ನಮೂದು ಸ್ಪಷ್ಟವಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**